ದಿನಾಂಕ ಃ 29.06.2022 ಓ.ಎಸ್ ನಂ.313/2014 ರಲ್ಲಿ
ಪಿ.ಡಬ್ಲ್ಯೂ-1(ವೆಂಕಟಲಕ್ಷ್ಮಮ್ಮ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 14ನೇ ಪ್ರತಿವಾದಿ ಪರ ಶ್ರೀ ಎಂ.ಸಿ.ಡಿ ವಕೀಲರಿಂದಃ

ನಾನು ಓದಿಲ್ಲ. ಕೇವಲ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತೇನೆ. ಈ ದಾವೆಯನ್ನು ದಾಖಲಿಸುವಾಗ 14ನೇ ಪ್ರತಿವಾದಿಯನ್ನು ಬಿಟ್ಟು ದಾಖಲಿಸಿದ್ದೆ ಎನ್ನುವುದು ಸರಿಯಲ್ಲ. 14ನೇ ಪ್ರತಿವಾದಿ ಅರ್ಜಿಯನ್ನು ಸಲ್ಲಿಸಿ ಈ ದಾವೆಯಲ್ಲಿ ಸೇರ್ಪಡೆಯಾಗಿ ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 2ನೇ ಸ್ವತ್ತು ಹೆಜ್ಜಾಲ ಗ್ರಾಮ, ಬಿಡದಿ ಹೋಬಳಿಗೆ ಸೇರಿದ್ದು ಎನ್ನುವುದು ನಿಜ. ದಾವಾ ಅನುಸೂಚಿ 2ನೇ ಸ್ವತ್ತು ಮೂಲತಃ ದೊಡ್ಡತಿಮ್ಮಯ್ಯನಿಗೆ ಸೇರಿದ್ದು ಎನ್ನುವುದು ನಿಜ. ಸದರಿ ಸ್ವತ್ತಿನಲ್ಲಿ ಒಟ್ಟು 1 ಎಕರೆ 8 ಗುಂಟೆ ಇತ್ತು ಎನ್ನುವುದು ನಿಜ. ದೊಡ್ಡತಿಮ್ಮಯ್ಯ ಸುಮಾರು 25 ವರ್ಷಗಳ ಹಿಂದೆ ಪೌತಿಯಾಗಿರುತ್ತಾರೆ. ಆತನ ಹೆಂಡತಿಯ ಹೆಸರು ಕೆಂಚಹನುಮಕ್ಕ. ಆಕೆ ಅಂದಾಜು ಎಷ್ಟು ವರ್ಷಗಳ ಮೊದಲು ಪೌತಿಯಾಗಿದ್ದಾರೆ ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲ. ಕೆಂಚಹನುಮಕ್ಕ ಸುಮಾರು 20 ವರ್ಷಗಳ ಮೊದಲು ಪೌತಿಯಾಗಿರುತ್ತಾರೆ ಎನ್ನುವುದು ನಿಜ. ಅವರಿಗೆ ರಂಗಪ್ಪ ಮತ್ತು ಸೀನಪ್ಪ ಎಂಬ ಇಬ್ಬರು ಮಕ್ಕಳು ಎನ್ನುವುದು ನಿಜ. ದಾವಾ ಅನುಸೂಚಿ 2ನೇ ಸ್ವತ್ತಿಗೆ ಸಂಬಂಧಿಸಿದಂತೆ ಸೀನಪ್ಪ ಹಾಗೂ ರಂಗಪ್ಪ ಪಂಚಾಯತ್ ಪಾರಿಕತ್ ಮುಖೇನ ವಿಭಾಗ ಮಾಡಿಕೊಂಡಿದ್ದು, ಸದರಿ ಸ್ವತ್ತು ಸೀನಪ್ಪನಿಗೆ ಬಂದಿದೆ ಎನ್ನುವುದು ಸರಿಯಲ್ಲ. ಅದರಂತೆ ಸದರಿ ಸ್ವತ್ತಿನ ದಾಖಲೆಗಳು ಸೀನಪ್ಪನ ಹೆಸರಿಗೆ ಬರುತ್ತಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸೀನಪ್ಪ ಪೌತಿಯಾಗಿದ್ದು, ಆತನ ಒಬ್ಬನೇ ಮಗ ವಂಕಟೇಶ್ (6ನೇ ಪ್ರತಿವಾದಿ) ಎನ್ನುವುದು ನಿಜ. ಸೀನಪ್ಪ ಪೌತಿಯಾದ

ದಿನಾಂಕ ಃ 29.06.2022 ಓ.ಎಸ್ ನಂ.313/2014 ರಲ್ಲಿ
ಪಿ.ಡಬ್ಲ್ಯೂ-1(ವೆಂಕಟಲಕ್ಷ್ಮಮ್ಮ)

ನಂತರ ಸದರಿ ಸ್ವತ್ತಿನ ಪಹಣಿ ಹಾಗೂ ಖಾತೆ 6ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎನ್ನುವುದು ನನಗೆ ಗೊತ್ತಿಲ್ಲ. 6ನೇ ಪ್ರತಿವಾದಿಯ ಹೆಸರಿಗೆ ಖಾತೆ ದಾಖಲಾದ ನಂತರ ಸದರಿ ಸ್ವತ್ತಿನ ಸರ್ವೇ ನಂ.15/1 ರಿಂದ 15/3 ಎಂದು ಬದಲಾವಣೆಯಾಗಿದೆ ಎನ್ನುವುದು ನಿಜ. ಅದರಂತೆ 6ನೇ ಪ್ರತಿವಾದಿಯ ಹೆಸರಿಗೆ ಎಂ.ಆರ್ ನಂ.5/2010-11 ಎಂದು ದಾಖಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸೀನಪ್ಪನ ಹೆಸರಿಗೆ ಹಾಗೂ ಆ ನಂತರ 6ನೇ ಪ್ರತಿವಾದಿಯ ಹೆಸರಿಗೆ ದಾವಾ ಅನುಸೂಚಿ 2ನೇ ಸ್ವತ್ತಿನ ಖಾತೆ ದಾಖಲಾಗಿರುವುದು ತಪ್ಪಾಗಿದೆ ಎಂದು ಈ ದಾವೆಯನ್ನು ಹೊರತುಪಡಿಸಿ ಬೇರೆಲ್ಲೂ ಪ್ರಶ್ನಿಸಿಲ್ಲ. ಸೀನಪ್ಪ ಹಾಗೂ 6ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಮಾಡುವ ಸಂದರ್ಭದಲ್ಲಿ ದೊಡ್ಡತಿಮ್ಮಯ್ಯನ ಕುಟುಂಬದವರಿಗೆ ತಕರಾರನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು ಎನ್ನುವುದನ್ನು ತಿಳಿದುಕೊಂಡಿದ್ದೀರಾ? ಎಂದರೆ ಸಾಕ್ಷಿಯು ನನ್ನ ಮಗನಿಗೆ ಗೊತ್ತಿರಬಹುದು ಎಂದು ನುಡಿಯುತ್ತಾರೆ. ನೀವಾಗಲೀ ಅಥವಾ ದೊಡ್ಡತಿಮ್ಮಯ್ಯನ ಕುಟುಂಬದವರಾಗಲೀ ತಕರಾರನ್ನು ಸಲ್ಲಿಸದ ಕಾರಣ ಸೀನಪ್ಪನ ಹೆಸರಿಗೆ ಹಾಗೂ ಆ ನಂತರ 6ನೇ ಪ್ರತಿವಾದಿಯ ಹಸೆರಿಗೆ ಖಾತೆ ದಾಖಲಾಗಿದೆ ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ.

2. ಈ ದಾವಯಲ್ಲಿ ನನ್ನ ಪರ ಯಾವ ದಾಖಲೆಗಳನ್ನು ಹಾಜರುಪಡಿಸಲಾಗಿದೆ ಎನ್ನುವ ಬಗ್ಗೆ ನನ್ನ ಮಗನಿಗೆ ಗೊತ್ತಿರುತ್ತದೆ. ದಾವಾ ಅನುಸೂಚಿ 2ನೇ ಸ್ವತ್ತಿಗೆ ಸಂಬಂಧಿಸಿದಂತೆ 6ನೇ ಪ್ರತಿವಾದಿಯ ಹೆಸರಿಗೆ ಪಹಣಿಯಾಗಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯ 14ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಏನು ಬರೆಸಿದ್ದಾರೆ ಎನ್ನುವುದನ್ನು ನನ್ನ ವಕೀಲರಿಂದ ನಾನು ತಿಳಿದುಕೊಂಡಿದ್ದೇನೆ. 6ನೇ

ಪ್ರತಿವಾದಿ, 14 ಪ್ರತಿವಾದಿಯಿಂದ 10,75,000/- ರೂಗಳನ್ನು ಪಡೆದುಕೊಂಡು ದಾವಾ ಅನುಸೂಚಿ 2ನೇ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 27.12.2007 ರಂದು ನೋಂದಾಯಿತ ಜಿ.ಪಿ.ಎ ಹಾಗೂ ದಿನಾಂಕ 28.12.2007 ರಂದು ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದಂತೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ದೊಡ್ಡತಿಮ್ಮಯ್ಯನ ಇಬ್ಬರು ಗಂಡು ಮಕ್ಕಳಾದ ಸೀನಪ್ಪ ಹಾಗೂ ರಂಗಪ್ಪ ಪಂಚಾಯತ್ ಪಾರಿಕತ್‌ನಂತೆ ವಿಭಾಗ ಮಾಡಿಕೊಂಡಿರುವ ಸಂಬಂಧ ಕಂದಾಯ ದಾಖಲೆಗಳಲ್ಲಿ ನಮೂದಾಗಿದೆ ಎನ್ನುವುದು ಸರಿಯಲ್ಲ.

3. ನನಗೆ ಮದುವೆಯಾಗಿ ಸುಮಾರು 40-45 ವರ್ಷಗಳಾಗಿವೆ. ದಾವಾ ಆಸ್ತಿಗಳ ದಾಖಲೆಗಳನ್ನು ನಾನು ಆ ಸಮಯದಿಂದಲೂ ನೋಡಿಕೊಂಡು ಬರುತ್ತಿದ್ದೇನೆ ಎನ್ನುವುದು ನಿಜ. ಈ ಎಲ್ಲಾ ಸ್ವತ್ತುಗಳು ವ್ಯವಸಾಯದ ಸ್ವತ್ತುಗಳು ಎನ್ನುವುದು ನಿಜ. ದಾವಾ ಸ್ವತ್ತುಗಳು ಒಳ್ಳೆಯ ಫಲ ಕೊಡುವ ಸ್ವತ್ತುಗಳಾಗಿದ್ದು ಹಾಗೂ ಸಮನಾದ ಬೆಲೆ ಬಾಳುತ್ತವೆ ಎನ್ನುವುದು ನಿಜ. 14 ಪ್ರತಿವಾದಿಯ ಹೆಸರಿಗೆ ಜಿ.ಪಿ.ಎ ಹಾಗೂ ಕ್ರಯದ ಕರಾರು ಪತ್ರ ಆದ ಸಮಯದಿಂದಲೂ ಅವರು ದಾವಾ ಅನುಸೂಚಿ 2ನೇ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎನ್ನುವುದು ಸರಿಯಲ್ಲ. ದಾವಾ ಅನುಸೂಚಿ 2ನೇ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಕಂದಾಯ ಪಾವತಿಸಿಲ್ಲ.

4. ದೊಡ್ಡತಿಮ್ಮಯ್ಯನಿಗೆ 4ನೇ ಮಗಳು ಲಕ್ಷ್ಮಮ್ಮ ಇದ್ದು, ಈಗ ಪೌತಿಯಾಗಿದ್ದಾಳೆ ಎನ್ನುವುದು ನಿಜ. ಆಕೆಗೆ ಇಬ್ಬರು ಮಕ್ಕಳಿದ್ದು ಅವರ ಹೆಸರುಗಳು ಹಾಗೂ ವಿಳಾಸ ನನಗೆ ಗೊತ್ತು ಎನ್ನುವುದು ನಿಜ. ಅವರನ್ನು

ದಿನಾಂಕ : 29.06.2022 ಓ.ಎಸ್ ನಂ.313/2014 ರಲ್ಲಿ
ಪಿ.ಡಬ್ಲ್ಯೂ-1(ವೆಂಕಟಲಕ್ಷ್ಮಮ್ಮ)

ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲದಿದ್ದರೂ ಸಹ ಈ ಬಗ್ಗೆ ಸುಳ್ಳು ಹೇಳುತ್ತಿದೇನೆ ಎನ್ನುವುದು ಸರಿಯಲ್ಲ. ದಾವಾ ಅನುಸೂಚಿ 2 ನೇ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕಿಲ್ಲದಿದ್ದರೂ ಸಹ ವಿನಾ ಕಾರಣ ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ ಎನ್ನುವುದು ಸರಿಯಲ್ಲ. ದೊಡ್ಡತಿಮ್ಮಯ್ಯನ ಕುಟುಂಬದಲ್ಲಿ ಸುಮಾರು 30 ವರ್ಷಗಳ ಮೊದಲೇ ವಿಭಾಗವಾಗಿದ್ದು, ಅದರಂತೆ ಖಾತೆ ಹಾಗೂ ಕಂದಾಯ ದಾಖಲೆಗಳು ಬರುತ್ತಿದ್ದು, ವಿನಾ ಕಾರಣ ಈ ದಾವೆಯನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ದೊಡ್ಡತಿಮ್ಮಯ್ಯನ ಹೆಸರಿನಲ್ಲಿರುವ ಯಾವುದೇ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.